ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ  ನ್ಯಾಯಾಲಯ , ಹಿರಿಯೂರು

**<u>ಸಿ ಸಿ ನಂ.1208 / 2024</u>**

| ಫಿರ್ಯಾದಿ | ವಿರುದ್ದ | ಆರೋಪಿ |
|---|---|---|
| ಹಿರಿಯೂರು ನಗರ ಪೊಲೀಸ್ ಠಾಣೆ<br>ಹಿರಿಯೂರು | | 1. ಮಂಜುನಾಥ,<br>ಬಿನ್  ಕಲ್ಲಳ್ಳಿರಂಗಪ್ಪ,<br>ಸುಮಾರು 32 ವರ್ಷ,<br>ವಾಸಃ ಹರಿಶ್ಚಂದ್ರಘಾಟ್,<br>ಹಿರಿಯೂರು ಟೌನ್. |

ದಂ. ಪ್ರ. ಸಂಹಿತೆ  ಕಲಂ 313 ರಡಿಯಲ್ಲಿ ಮಾಡಿ
ಕೊಳ್ಳಲಾದ ಆರೋಪಿತನ  ಹೇಳಿಕೆ

ಪ್ರಶ್ನೆಃ  – ಈ ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ಸಾಕ್ಷಿದಾರರು ಸಾಕ್ಷ್ಯ  ನುಡಿದಿರುವುದನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ–

ಪ್ರಶ್ನೆಃ  –  ಪ್ರಾಸಾ–1 ದುರುಗೇಶ್  ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ08.04.2024 ರಂದು ಆರೋಪಿ ತನ್ನ ಕಮೀಷನರ್ ಪರವಾಗಿ ಮಾತನಾಡುತ್ತೀಯಾ ಎಂದು ತನಗೆ ಅವಾಚ್ಯ ಶಬ್ಧಗಳಿಂದ ಬೈದು ತನ್ನ ಎಡಗಡೆ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾರೆ ಮತ್ತು ಕೈಕಾಲುಗಳಿಂದ ಹೊಡೆದಿರುತ್ತಾರೆ. ನಂತರ ತನಗೆ ಆರೋಪಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಇದರಿಂದ ತನ್ನ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ. ನಂತರ ಚಾಸಾ–2 ಮತ್ತು 3 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ತಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ

ಪಡೆದು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ-

ಪ್ರಶ್ನೆಃ - ಫ್ರಾಸಾ-1 ರವರು ಮುಂದುವರಿದ ತಮ್ಮ ಸಾಕ್ಷ್ಯದಲ್ಲಿ,ನಂತರ ಅದೇ ದಿನ ಪೊಲೀಸ್‌ರು ಸ್ಥಳ ಪಂಚನಾಮೆಗಾಗಿ ಘಟನಾ ಸ್ಥಳಕ್ಕೆ ಬಂದಿದ್ದು ತಾನು ತೋರಿಸಿಕೊಟ್ಟಂತೆ ಚಾಸಾ-6 ಮತ್ತು 7 ರವರ ಸಮಕ್ಷಮ ಪಂಚನಾಮೆಯನ್ನು ಜರುರಿಸಿರುತ್ತಾರೆ. ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.00 ಗಂಟೆಯವರೆಗೆ ಜರುರಿಸಿರುತ್ತಾರೆ. ಈ ಕುರಿತು ತಾನು ಪೊಲೀಸ್‌ರಿಗೆ ಮರು ಹೇಳಿಕೆ ನೀಡಿರುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ-

ಪ್ರಶ್ನೆಃ - ಫ್ರಾಸಾ-2 ದಿವಾಕರ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ08.04.2024 ರಂದು ಆರೋಪಿ ಮತ್ತು ಚಾಸಾ-1 ರವರ ನಡುವೆ ಜಗಳ ಆಗಿರುತ್ತದೆ. ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಅವರ ಎಡಗಡೆ ಕಪಾಳಕ್ಕೆ ಕೈಯಿಂದ ಹೊಡೆದಿರುತ್ತಾರೆ ಮತ್ತು ಕೈಕಾಲುಗಳಿಂದ ಹೊಡೆದಿರುತ್ತಾರೆ. ಇದರಿಂದ ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ. ನಂತರ ನಾನು ಮತ್ತು ಚಾಸಾ-2 ರವರು ಗಲಾಟೆಯನ್ನು ಬಿಡಿಸಿರುತ್ತೇವೆ. ನಂತರ ಚಾಸಾ-1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ. ಈ ಕುರಿತು ನಾನು ಪೊಲೀಸ್‌ರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ-

ಪ್ರಶ್ನೆ: - ಫ್ರಾಸಾ-7 ಶಶಿಕಲಾ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ:29.08.2024 ರಂದು ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ ಅದೇ ದಿನ ಚಾಸಾ-1 ರವರ ಕರ್ತವ್ಯ ಧೃಢೀಕರಣ ಪತ್ರವನ್ನು ಚಾಸಾ-8 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದಲ್ಲಿ ತನಿಖೆ ಮುಕ್ತಾಯಗೊಂಡಿದ್ದು ಆರೋಪಿಯ ಮೇಲೆ ಮೇಲ್ನೋಟಕ್ಕೆ ಆರೋಪ ಸಾಬೀತಾಗಿದ್ದರಿಂದ ಆರೋಪಿ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರ:-

ಪ್ರಶ್ನೆ: - ನೀವು ಏನಾದರೂ ಹೇಳುವುದಿದೆಯಾ ?

ಆರೋಪಿಯ ಉತ್ತರ:-

ಪ್ರಶ್ನೆ: - ನಿಮ್ಮ ಪರವಾಗಿ ವಿಚಾರಣೆ ಮಾಡುತ್ತೀರಾ? ಯಾವುದಾದರೂ ಸಾಕ್ಷ್ಯಗಳಿವೆಯೆ?

ಆರೋಪಿಯ ಉತ್ತರ:-

ಪ್ರಶ್ನೆ: - ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಗಳನ್ನು ಸಲ್ಲಿಸುತ್ತೀರಾ ?

ಆರೋಪಿಯ ಉತ್ತರ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ಯತಾವತ್ತಾಗಿ ದಾಖಲಿಸಲಾಗಿದೆ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್ ಸಿ, ಹಿರಿಯೂರು

ದಂ. ಪ್ರ. ಸಂಹಿತೆ ಕಲಂ 313 ರಡಿಯಲ್ಲಿ ಮಾಡಿ
ಕೊಳ್ಳಲಾದ ಆರೋಪಿತನ ಮುಂದುವರಿದ ಹೇಳಿಕೆ

ಪ್ರಶ್ನೆಃ – ಫ್ರಾಸಾ–8 ನಾಗರಾಜ್. ಟಿ. ಎಂ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 31.05.2024 ರಂದು ಈ ಪ್ರಕರಣದ ಕಡತವನ್ನು ಚಾಸಾ–12 ರವರಿಂದ ಸ್ವೀಕರಿಸಿ ತನಿಖೆಯನ್ನು ಮುಂದುವರಿಸಿ ಚಾಸಾ–1 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಚಾಸಾ–14 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಆರೋಪಿಯ ಉತ್ತರಃ–

ಪ್ರಶ್ನೆಃ – ನೀವು ಏನಾದರೂ ಹೇಳುವುದಿದೆಯಾ ?

ಆರೋಪಿಯ ಉತ್ತರಃ–

ಪ್ರಶ್ನೆಃ – ನಿಮ್ಮ ಪರವಾಗಿ ವಿಚಾರಣೆ ಮಾಡುತ್ತೀರಾ? ಯಾವುದಾದರೂ ಸಾಕ್ಷ್ಯಗಳಿವೆಯೆ?

ಆರೋಪಿಯ ಉತ್ತರಃ–

ಪ್ರಶ್ನೆಃ – ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಗಳನ್ನು ಸಲ್ಲಿಸುತ್ತೀರಾ ?

ಆರೋಪಿಯ ಉತ್ತರಃ–

(ತೆರೆದ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟಿರುವ ಉತ್ತರವನ್ನು ಯತಾವತ್ತಾಗಿ ದಾಖಲಿಸಲಾಗಿದೆ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್ ಸಿ, ಹಿರಿಯೂರು